ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ.

ಸಿ.ಸಿ.ನಂ.**732/2020**

ರಾಜ್ಯದ ಪರವಾಗಿ ಬೈಲಹೊಂಗಲ ಅಬಕಾರಿ ಪೊಲೀಸ ಠಾಣೆ

ಪಿರ್ಯಾದುದಾರರು .

// ವಿರುದ್ಧ //

1. ಮಾರುತಿ ಶೇಖಪ್ಪ ಕಲ್ಲವಡ್ಡರ.

ಆರೋಪಿತ.

ದೋಷಾರೋಪಣೆ

ನಾನು ರೋಹಿಣಿ ಡಿ. ಬಸಾಪೂರ., ಎಲ್.ಎಲ್.ಎಂ, ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಅಂದರೆಃ

ಮಾರುತಿ ಶೇಖಪ್ಪ ಕಲ್ಲವಡ್ಡರ, ವಯಾಃ 27 ವರ್ಷ,
ಸಾಃ ಸಂಪಗಾಂವ, ತಾಃ ಬೈಲಹೊಂಗಲ .

ಈ ಕೆಳಗಿನ ಆರೋಪಕ್ಕೆ ಗುರಿಪಡಿಸುತ್ತಿದ್ದೆನೆ.

ಆರೋಪಿಯಾದ ನಿಮ್ಮ ಮೇಲೆ ಆರೋಪಿಸುವುದೇನೆಂದರೆ, ಬೈಲಹೊಂಗಲ ಪೊಲೀಸ ಠಾಣೆಯ ಹದ್ದಿಯ ಪೈಕಿ ಸಂಪಗಾಂವ ಗ್ರಾಮದ ಬಸ್ಸ ನಿಲ್ದಾಣದ ಮುಂದೆ ಸಾರ್ವಜನಿಕ ಸ್ಥಳದಲ್ಲಿ ದಿಃ 02.10.2019 ರಂದು 08.30 ಗಂಟೆಯ ಸಮಯದಲ್ಲಿ ಆರೋಪಿಯಾದ ನೀವು ಸರ್ಕಾರದಿಂದ ಯಾವುದೇ ಲೈಸನ್ಸ, ಪರ್ಮಿಟ ಹೊಂದದೆ, ರೂ. 2850/- ಕಿಮ್ಮತ್ತಿನ ಓರಿಜಿನಲ್ ಚಾಯಿಸ್ ಕಂಪನಿಯ 90 ಎಮ್ ಎಲ್ ದ 94 ಸರಾಯಿ ಪೌಚಗಳನ್ನು ತನ್ನ ತಾಬಾದಲ್ಲಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು ಆ ಪ್ರಕಾರ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಅದೇ ದಿನ, ಸಮಯ, ಸ್ಥಳದಲ್ಲಿ ಆರೋಪಿಯಾದ ನೀವು ಅನಧಿಕೃತವಾಗಿ ತಯಾರಾದ ಸರಾಯಿ ಎಂದು ಗೊತ್ತಿದ್ದರೂ ತಮ್ಮ ಸ್ವಾಧಿನದಲ್ಲಿ ಇಟ್ಟುಕೊಂಡು ಮಾರಾಟ ಮಾಡಲು ಕಾರಣಿಬೂತನಾಗಿದ್ದು ಆ ಪ್ರಕಾರ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಪ್ರಶ್ನೆ 1: ಈ ಮೇಲಿನ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ನಂ.2 : ಈ ಮೇಲಿನ ಆಪಾಧನೆಯನ್ನು ನೀವು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯನ್ನು ನಡೆಸುವಿರಾ?

ಉತ್ತರ :

(ಈ ಮೇಲಿನ ದೋಷಾರೋಪಣೆ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಈ ದಾಖಲೆಯು ಆರೋಪಿಯು ನೀಡಿದ ನಿಜವಾದ ಮತ್ತು ಅವರ ಪೂರ್ಣವಾದ ಹೇಳಿಕೆಯನ್ನು ಒಳಗೊಂಡಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ.)

ದಿ. 09.06.2026 ಪ್ರ.ಪ್ರ.ದ.ನ್ಯಾದಂ.ಬೈಲಹೊಂಗಲ

Accused present. Charges framed by reading out allegations in Kannada language. Accused denied charges and claimed for trial issue W/s.

R/by: -0 -2026.

**Prl CJ & JMFC Bailhongal**